ವ್ಯಾವಹಾರಿಕ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ
ಮೂಡಬಿದಿರೆ

ಸಿಸಿ ನಂ.201/2018 ,

ಚಾಸಾ- 11, ಫ್ರಾಸಾ -8

| | |
|---|---|
| ಹೆಸರು | ಪ್ರಜ್ವಲ್ |
| ತಂದೆಯ ಹೆಸರು | ಸಿಲ್ವಸ್ಟರ್ ಮಸ್ಕರೇನ್ಸ್ |
| ವಯಸ್ಸು | 45 ವರ್ಷ |
| ಕೆಲಸ | ಕೃಷಿ |
| ವಾಸ | ಪುತ್ತಿಗೆ |
| ಪ್ರಮಾಣೀಕರಿಸಿದ ದಿನಾಂಕ | 02-07-2025 |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದಃ

1. ಆರೋಪಿ ಗೊತ್ತು . ದಿಃ 18-11-2017 ರಂದು ಪೊಲೀಸರು ನನ್ನನ್ನು ಹಾಗೂ ಚಾಸಾ-6 ರವರನ್ನು ಜೊತೆ ಗೂಡಿ ಉರ್ಕಿ ಎಂಬಲ್ಲಿ ಒಂದು ಹಂಚಿನ ಮನೆಗೆ ಕರೆದುಕೊಂಡು ಹೋಗಿರುತ್ತಾರೆ . ಆ ದಿನ ಆರೋಪಿಯು ಸದರಿ ಮನೆಯ ಒಳಗೆ ಹೋಗಿ ಒಂದು ಗಂಟನ್ನು ತಂದು ತೋರಿಸಿರುತ್ತಾನೆ . ಸದರಿ ಗಂಟಿನಲ್ಲಿ ಸರ , ಕರಿಮಣಿ ಸರ , ಉಂಗುರ , ಬಳೆ ಹಲವಾರು ಆಭರಣಗಳು ಇದ್ದವು . ಬೆಳಿಗ್ಗೆ 10-00 ಗಂಟೆಯ ನಂತರ 12-00 ಗಂಟೆಯವರೆಗೆ ಮಹಜರನ್ನು ಮಾಡಿರುತ್ತಾರೆ . ನಿಪಿ-4 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು . ಸದರಿ ಸಮಯದಲ್ಲಿ ಚಾಸಾ-6, ಚಾಸಾ-8 ರವರು ಸ್ಥಳದಲ್ಲಿ ಹಾಜರಿದ್ದರು. ಸಾಕ್ಷಿ ಒಂದು ಫೋಟೋವನ್ನು ನೋಡಿ , ಸದರಿ ಫೋಟೋ ಆರೋಪಿಯ ಮನೆಯಲ್ಲಿ ತೆಗೆಯಲಾದ ಫೋಟೋ ಎಂದು ನೋಡಿ ಗುರುತಿಸಿದ ಮೇರೆಗೆ ಸದರಿ ಫೋಟೋವನ್ನು ನಿಪಿ-10 ಎಂದು ಗುರುತಿಸಲಾಯಿತು . ಆ ಸಮಯದಲ್ಲಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ .

*(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ವಿಚಾರಣೆ ಮಾಡಲು ಮಾನ್ಯ ಸ ಸ ಅ ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)*

ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ

ಆ ಸಮಯದಲ್ಲಿ 10 ಮೊಬೈಲೂಗಳನ್ನೂ ಸಹ ಸ್ವಾಧೀನ ಪಡಿಸಿಕೊಂಡಿರುತ್ತಾರೆ ಎಂದರೆ ಸರಿ .

ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎಸ್.ಡಿ ರವರಿಂದಃ

ನಾನು ನಮ್ಮ ಮನೆಯಿಂದ ನೇರವಾಗಿ ಪೊಲೀಸ್ ಠಾಣೆಗೆ ಬಂದಿದ್ದೆ . ಆಗ ಪೊಲೀಸರು ಟೈಪ್ ಮಾಡಿ ನನ್ನ ಹಾಗೂ ಚಾಸಾ-6 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ . ಸದರಿ ಸಹಿ ನಿಪಿ-4 ರಲ್ಲಿಯ ಸಹಿಯಾಗಿರುತ್ತದೆ . ಆರೋಪಿ ಮನೆಯೊಳಗೆ ಹೋಗಿ ಪ್ಲಾಸ್ಟಿಕ್ ತೊಟ್ಟೆಯನ್ನು ತಂದು ಪೊಲೀಸರಿಗೆ ನೀಡಿರುತ್ತಾನೆ . ಅದೇ ಪ್ಲಾಸ್ಟಿಕ್ ತೊಟ್ಟೆಯಲ್ಲಿ ಮೊಬೈಲುಗಳೂ ಸಹ ಇದ್ದವು . ಪೊಲೀಸರು ಅದನ್ನು ಹಿಡಿದುಕೊಂಡು ಠಾಣೆಗೆ ಬಂದಿರುತ್ತಾರೆ , ಪೊಲೀಸರು ಠಾಣೆಗೆ ಬಂದು ಗಂಟನ್ನು ಬಿಚ್ಚಿ ಅದರಲ್ಲಿ ಇದ್ದ ಬಂಗಾರವನ್ನು ತೂಕ ಮಾಡಿರುತ್ತಾರೆ . ನಾನು ಸ್ಥಳಕ್ಕೆ ಹೋದ್ದದ್ದೆ ಇಲ್ಲ ಎಂದರೆ ಸರಿಯಲ್ಲ .

(ಮರುವಿಚಾರಣೆ ಇಲ್ಲ.)

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು .

ಓದಿ ಹೆ.ಕೇ ಸ ಇದೆ .

ಸಹಿ/-

ವ್ಯ ನ್ಯಾಮತ್ತು ಪ್ರ.ದ.ನ್ಯಾದಂ.

ಮೂಡಬಿದಿರೆ